ಪ್ರವೇಶ ಪಡೆಯಬೇಕಾದರೆ, ವಿದ್ಯಾರ್ಥಿಯ ಮುಖಕ್ಕೆ ಚುಟ್ಟಿಗಳನ್ನು ಬರೆದು, ಕಥಕಳಿ ಮುದ್ರೆಗಳನ್ನು ಅಭಿವ್ಯಕ್ತಿಸಲು ಸಾಧ್ಯವೇ ಎಂದು ನೋಡುತ್ತಾರೆ. ಅದೊಂದು ರೀತಿಯ ಪ್ರವೇಶ ಪರೀಕ್ಷೆ. ಆದರೆ ಮಹಾಕವಿ ವಳ್ಳತ್ತೋಳ್ ಗುರುಗಳು ನನ್ನ ಮುಖವನ್ನೊಮ್ಮೆ ದಿಟ್ಟಿಸಿ, 'ಹೋಗು, ತರಗತಿಗೆ ಸೇರಿಕೋ' ಎಂದುಬಿಟ್ಟರು. ಅಂದು ನನಗೆ ಲಭಿಸಿದ ಆಶೀರ್ವಾದ ನನ್ನ ಬದುಕನ್ನೇ ಪೊರೆದಿದೆ.

ನನ್ನನ್ನು ಮನೆಗೆ ವಾಪಸ್ ಕಳಿಸಿದ ಆ ಮುಸಲ್ಮಾನ ವ್ಯಕ್ತಿಯ ಹೆಸರೂ ನನಗೆ ಗೊತ್ತಿಲ್ಲ. ನನಗೆ ಬದುಕಿನಲ್ಲಿ ಕಥಕಳಿಯೆಂಬ ಮಹಾಭಾಗ್ಯವೇ ದೊರೆಯುವಂತೆ ಅವರು ಮಾಡಿದ್ದಾರೆ. ಅವರನ್ನು ನಾನು ದೇವರೆಂದೇ ತಿಳಿದಿದ್ದೇನೆ. ಈ ಕಲೆಯು ನನ್ನ ಕೈ ಹಿಡಿದು ನಡೆಸಿದೆ. (ನಗು..) ನನ್ನ ಬಾಲ್ಯದ ಕಥೆಯಲ್ಲಿ ಆ ಮುಸಲ್ಮಾನ ವ್ಯಕ್ತಿ ಕಾಡುತ್ತಾನೆ. ಹಾಗೆಯೇ ಕಾಣದ ಅಮ್ಮನ ನೆನಪೂ ಕಾಡುತ್ತದೆ. ನನ್ನದು ಹಸ್ತಾ ನಕ್ಷತ್ರವಂತೆ. ಅಮ್ಮನ ಬಾಳಿಗೆ ಕಂಟಕನಾಗಿ ಹುಟ್ಟಿದೆನಂತೆ. ಇತ್ತೀಚೆಗೆ ಎರಡು ವರ್ಷಗಳ ಹಿಂದೆ, ಕೋವಿಡ್ ಸೋಂಕು ತಡೆಯಲು ಲಾಕ್‌ಡೌನ್ ಹೇರಿದ್ದಾಗ, ಅಮ್ಮ ಬಹಳ ನೆನಪಾದಳು. ಅವಳ ಕ್ಷಮೆ ಕೋರಿ ಕವನವನ್ನು ಬರೆದಿದ್ದೆ. ಲಾಕ್‌ಡೌನ್ ಇದ್ದಾಗ ನಾನು ಅನೇಕ ಕವನಗಳನ್ನೂ ಬರೆದೆ. ಭಾವನೆಗಳ ಹರಿವಿಗೆ ಅದೊಂದು ಮಾರ್ಗವಷ್ಟೆ.

**◆ ರಂಗದ ಮೇಲೆ ನಾಯಕ ಪಾತ್ರಗಳನ್ನೇ ಹೆಚ್ಚಾಗಿ ನಿರ್ವಹಿಸಿದ್ದೀರಿ. ಈ ದಾರಿಯಲ್ಲಿ ಇಷ್ಟು ದೂರ ಸಾಗಿದ ಬಳಿಕ ಈಗ ಏನನಿಸುತ್ತದೆ?**

ನಾನು ನಿರ್ವಹಿಸಿದ್ದು ಹೆಚ್ಚಾಗಿ ನಾಯಕ ಪಾತ್ರ. ನಾನು ನಳನ ಪಾತ್ರ ನಿರ್ವಹಿಸಬೇಕು ಎಂದು ಅನೇಕರು ದುಂಬಾಲು ಬೀಳುತ್ತಿದ್ದರು. ಆದರೆ ನನ್ನನ್ನು ಕಾಡುವ ಪಾತ್ರವೆಂದರೆ ಕರ್ಣನದ್ದು. ಅಮ್ಮನ ಪ್ರೀತಿಯನ್ನು ಉಣ್ಣದೇ ಇದ್ದ ಮಹಾರಥಿ ಕರ್ಣ. 'ಕರ್ಣ ಶಪಥ' ಎಂಬ ಪ್ರಸಂಗದಲ್ಲಿ ಕುಂತಿಯನ್ನು ಆಕಸ್ಮಿಕವಾಗಿ ಭೇಟಿಯಾಗುವ ಕರ್ಣನ ಪ್ರತಿವರ್ತನೆ ಆಶಾನ್ ಅವರು ಅಭಿನಯಿಸಿದ ಹಾಗೆ ಇನ್ನೊಬ್ಬರಿಗೆ ಅಭಿನಯಿಸಿ ತೋರಿಸಲು ಸಾಧ್ಯವಿಲ್ಲ ಎಂಬುದು ಕೇರಳದ ರಸಿಕವರ್ಗದಲ್ಲಿ ಜನಜನಿತ ಮಾತಿದೆ ಎಂದು ಕೇಳಿದ್ದೇನೆ. ಅವನ ಮಾತುಗಳಲ್ಲಿ ನನ್ನ ನೋವೂ ಇದೆ. 'ನಿನ್ನ ಅಂತರಂಗದಲ್ಲಿ ದಯೆ ಸ್ವಲ್ಪವೂ ಇಲ್ಲವೋ...?' ಎಂದು ಕುಂತಿ ಕರ್ಣನಲ್ಲಿ ಕೇಳಿದೊಡನೆ, 'ಮಗುವನ್ನು ನೀರಿನಲ್ಲಿ ತ್ಯಜಿಸುವ ಸಮಯ ನಿನ್ನ ದಯೆ ಎಲ್ಲಿ ಹೋಗಿತ್ತು...?' ಎಂದು ಮರು ಪ್ರಶ್ನೆ ಕೇಳುತ್ತಾನೆ ಕರ್ಣ. ಪಶ್ಚಾತ್ತಾಪದಿಂದ ತಲೆ ಕೆಳಗೆ ಹಾಕುವ ಅಮ್ಮನನ್ನೂ, ಹತಾಶನಾಗಿ ನಿಂತಿದ್ದ ಮಗನನ್ನೂ, ಅವರಿಬ್ಬರ ನಡುವೆ ಹರಡಿಕೊಳ್ಳುವ ಇರಿಯುವ ಮೌನವನ್ನೂ ನೋಡಿ ಸಭಿಕರು ಕಣ್ಣೀರು ಸುರಿಸುವುದನ್ನು ನೋಡಿದ್ದೇನೆ. ಅಂತಹ ಪಾತ್ರಗಳನ್ನು ನಿರ್ವಹಿಸಿದಾಗ ನನ್ನಲ್ಲೂ ಬೇಸರದ ಛಾಯೆಯೂ, ಚೆನ್ನಾಗಿ ನಿರ್ವಹಿಸಿದ ಬಗ್ಗೆ ಸಂತೃಪ್ತಿಯ ಭಾವವೂ ಏಕಕಾಲಕ್ಕೆ ಮೂಡುತ್ತದೆ. ಕಥಕಳಿಯನ್ನು ನಾನು ಜಾಗೃತಿ, ಸ್ವಪ್ನ , ಸುಷುಪ್ತಿಯಲ್ಲಿಯೂ ಯೋಚಿಸುತ್ತಿರುತ್ತೇನೆ. ಒಬ್ಬ ಕಲಾವಿದನಾದವನು ಹಾಗೆಯೇ ಇರಬೇಕು ಎಂದು ಗುರುಗಳು ಹೇಳುತ್ತಿದ್ದರು. ಈಗ, ಈ 86ರ ವಯಸ್ಸಿನಲ್ಲಿಯೂ ನಾನು ಅತ್ತಿಂದಿತ್ತ ಸುಳಿದಾಡುವಾಗ, ಸುಮ್ಮನಿರುವಾಗಲೂ... ಕಥಕಳಿಯೇ ಮನವನ್ನು ಆವರಿಸಿರುತ್ತದೆ. ಈ ನಿರಂತರ ತಪಸ್ಸಾಧನೆ ಇದ್ದಾಗ ಮಾತ್ರ ಕಲೆಯ ಸತ್ವವನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತದೆ. ಮನಸ್ಸು ಹೀಗಿದ್ದಾಗ ಮಾತ್ರ ಪಾತ್ರವೊಂದನ್ನು ನಿರ್ವಹಿಸಲು ಹೆಚ್ಚಿನ ಪೂರ್ವ ತಯಾರಿ ಏನೂ ಬೇಕಾಗುವುದಿಲ್ಲ. ಪೋಷಾಕುಗಳು ನಮ್ಮ ದೇಹವನ್ನು ಅಲಂಕರಿಸುತ್ತಿದ್ದಂತೆಯೇ ಭಾವವೂ ನಿಧಾನವಾಗಿ ನಮ್ಮನ್ನು ಆವರಿಸುತ್ತದೆ. ಪ್ರಸ್ತುತಿಯು ಮುಗಿದು ವೇಷ ಕಳಚುವ ವೇಳೆಗೆ ಪಾತ್ರದಿಂದ ಹೊರಬಂದಿರುತ್ತೇವೆ. ಆದರೆ ಕಥಕಳಿ ಎಂಬ ಕಲಾಧ್ಯಾನದಿಂದ ಹೊರಬಂದಿರುವುದಿಲ್ಲ. ಹೀಗೆ ಪ್ರದರ್ಶನಗಳನ್ನು ನೀಡುತ್ತಿರುವಾಗ ಕಲಾವಿದನು ಯಾವ ಪಾತ್ರವನ್ನು ಚೆನ್ನಾಗಿ ನಿರ್ವಹಿಸುತ್ತಾನೆ ಎಂದು ಪ್ರೇಕ್ಷಕನೇ ನಿರ್ಧರಿಸುತ್ತಾನೆ. 'ನಾನು ಈ ಪಾತ್ರ ಮಾಡುತ್ತೇನೆ' ಎಂದು ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಳ್ಳುವುದಲ್ಲ. ಗುರುವಾಯೂರಪ್ಪನ ದಯೆಯಿಂದ ಪ್ರೇಕ್ಷಕರು ನನ್ನನ್ನು ಪಚ್ಚೆವೇಷ ಧಾರಿಯಾಗಿಯೇ (ನಾಯಕ ಪಾತ್ರ) ನೋಡಲು ಇಷ್ಟಪಟ್ಟಿದ್ದಾರೆ. ಹಾಗಾಗಿ ಧರ್ಮರಾಯ, ನಳ, ಕರ್ಣ, ಪಾತ್ರಗಳನ್ನು ಮಾಡಿದ್ದುಂಟು. ಕಲ್ಯಾಣ ಸೌಗಂಧಿಕದ ಭೀಮನ ಪಾತ್ರ, ಸುಭದ್ರಾಹರಣಮ್